# ನ್ಯಾಯಸ್ಥಾನಕ (ಫಾರೆನ್ಸಿಕ್) ಮನೋವಿಜ್ಞಾನ

Forensic Psychology

ಇಂದಿರಾ ಜೈಪ್ರಕಾಶ್

ನ್ಯಾಯಾಲಯ ಮತ್ತು ಕಾನೂನಿಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಕೆಲಸಮಾಡುವವರು ನ್ಯಾಯಸ್ಥಾನಕ (ಫಾರೆನ್ಸಿಕ್) ಮನೋವಿಜ್ಞಾನಿಗಳು. ಕಾನೂನು ಮತ್ತು ಮನೋವಿಜ್ಞಾನ ಎರಡರ ಜ್ಞಾನವನ್ನು ಉಪಯೋಗಿಸುವ ಅನ್ವಯಿಕ ಶಾಖೆ ಇದು. ಇತ್ತೀಚಿನ ದಿನಗಳಲ್ಲಿ ಬಹಳ ಪ್ರಾಮುಖ್ಯತೆ ಪಡೆಯುತ್ತಿರುವ ಈ ವಿಷಯದ ಉಗಮ ವುಂಡ್ಟ್ 1873 ರಲ್ಲಿ ಸ್ಥಾಪಿಸಿದ ಪ್ರಥಮ ಪ್ರಯೋಗಶಾಲೆಯಲ್ಲಿದೆ. ಇವನಿಂದ ತರಬೇತಿ ಪಡೆದ ಹ್ಯೂಗೋ ಮುಂಸ್ಟರ್‌ಬರ್ಗ್ ಅಮೆರಿಕೆಗೆ ಬಂದು 1892ರಲ್ಲಿ ಸುಳ್ಳು ಸಾಕ್ಷ್ಯ, ವಶ್ಯಸುಪ್ತಿಯಿಂದ ಸಾಕ್ಷಿ ಪಡೆಯುವುದು, ಸಾಕ್ಷಿಗಳು ಘಟನೆಯನ್ನು ನೆನೆಪಿಸಿಕೊಳ್ಳುವುದರಲ್ಲಿ ನಡೆಯುವ ತಪ್ಪುಗಳು ಇವನ್ನೆಲ್ಲಾ ವೈಜ್ಞಾನಿಕವಾಗಿ ಅಭ್ಯಸಿಸಿದ. ಇದರ ಫಲ 'ಆನ್ ದಿ ವಿಟ್ನೆಸ್ ಸ್ಟ್ಯಾಂಡ್' ಎನ್ನುವ ಇವನ ಈ ವಿಷಯದ ಪ್ರಥಮ ಪುಸ್ತಕ. 1895 ರಲ್ಲಿ ಕೊಲಂಬಿಯಾದಲ್ಲಿ ಜೇಮ್ಸ್ ಮೆಕ್ಕಿನ್ ಕೆಟೆಲ್ ಪ್ರತ್ಯಕ್ಷ ದರ್ಶಿಗಳ ಬಗ್ಗೆ ಪ್ರಯೋಗಗಳನ್ನು ಮಾಡಿದ್ದ. ಇವನಿಂದ ಪ್ರಭಾವಿತರಾದ ಬಿನೆ ಮತ್ತು ವಿಲಿಯಂ ಸ್ಟರ್ನ್ ಕೂಡಾ ಇಂತಹ ಪ್ರಯೋಗಗಳನ್ನು ನಡೆಸಿದರು. 1917ರಲ್ಲಿ ಮುಂಸ್ಟರ್‌ಬರ್ಗ್ನ ಶಿಷ್ಯ ವಿಲಿಯಂ ಮಾರ್ಸ್ಟ್ನ್ ಸುಳ್ಳು ಹೇಳುವಾಗ ವ್ಯಕ್ತಿಗಳ ರಕ್ತದೊತ್ತಡದಲ್ಲಿ ಏರುಪೇರಾಗುವುದನ್ನು ವರ್ಣಿಸಿದ್ದು ಸುಳ್ಳುಪತ್ತೆ ಹಚ್ಚುವ ಆಧುನಿಕ ಪಾಲಿಗ್ರಾಫ್‌ಗಳ ಮೂಲವಾಯಿತು. ಇವನು 1923ರಲ್ಲಿ ನ್ಯಾಯಾಲಯದಲ್ಲಿ ತಜ್ಞ ಸಾಕ್ಷಿಯಂತೆ ಹಾಜರಾದ ಪ್ರಥಮ ಅಮೆರಿಕನ್ ಮನೋವಿಜ್ಞಾನಿ.(1896 ರಲ್ಲೇ ಯೂರೋಪ್ ನಲ್ಲಿ ಆಲ್ಬರ್ಟ್ ವಾನ್ ಶ್ರಂಕ್-ನಾಟ್ಜಿಂಗ್ ಸಾಕ್ಷಿನುಡಿದ ಪ್ರಥಮ ಮನೋವಿಜ್ಞಾನಿ ಎನ್ನಲಾಗಿದೆ). 1954ರಲ್ಲಿ ಅಮೆರಿಕೆಯ ನ್ಯಾಯಾಲಯಗಳು ಮನೋವಿಜ್ಞಾನಿಗಳಿಗೆ ಮನೋರೋಗಗಳ ವಿಷಯದಲ್ಲಿ ತಜ್ಞ ಸಾಕ್ಷಿಗಳ ಸ್ಥಾನ ನೀಡಿದವು. ಅಮೆರಿಕನ್ ಸೈಕಲಾಜಿಕಲ್ ಅಸೋಸಿಯೇಶನ್ (ಎ.ಪಿ.ಎ) 2001 ರಲ್ಲಿ ಈ ವಿಷಯವನ್ನು ಮನೋವಿಜ್ಞಾನದ ಒಂದು ಭಾಗವೆಂದು ಸ್ವೀಕರಿಸಿತು.

ನ್ಯಾಯಾಲಯಗಳಲ್ಲಿ ಕಾನೂನು ಮನೋವಿಜ್ಞಾನಿಗಳ ಕೆಲಸ ಮುಖ್ಯವಾಗಿ ಹೀಗಿವೆ. 1) ಮನೋರೋಗದ ನಟನೆ- ಆರೋಪಿ ರೋಗಿಯಂತೆ ನಟನೆ ಅಥವಾ ಸಮಸ್ಯೆಯ ಉತ್ಪ್ರೇಕ್ಷೆ ಮಾಡಿದಾಗ ಅದರ ಸತ್ಯಾಸತ್ಯತೆ ಪರಿಶೀಲಿಸುವುದು. 2) ಕಾನೂನಿನ ವಶದಲ್ಲಿರುವ ವ್ಯಕ್ತಿ ಮೊಕದ್ದಮೆ ಎದುರಿಸಲು ಅಥವಾ ಜಾಮೀನು ಪಡೆಯಲು ಮಾನಸಿಕವಾಗಿ ಅರ್ಹನೇ ಎಂದು ಪರೀಕ್ಷಿಸುವುದು. 3) ಹುಚ್ಚುತನದ ನೆಪ- ಅಪರಾಧ ನಡೆದ ಸಂದರ್ಭದಲ್ಲಿ ವ್ಯಕ್ತಿಯ ಮಾನಸಿಕ ಸ್ಥಿತಿ ಅಪಸಾಮಾನ್ಯವಾಗಿತ್ತೇ ಎಂದು ನಿರ್ಧರಿಸುವುದು. 4) ಶಿಕ್ಷೆಯನ್ನು

ತಗ್ಗಿಸುವುದು- ವ್ಯಕ್ತಿ ಅಪರಾಧ ಮಾಡಿದಾಗ ಮಾನಸಿಕವಾಗಿ ಅಸ್ವಸ್ಥನಾಗಿಲ್ಲದಿದ್ದರೂ ವಕೀಲರು ಶಿಕ್ಷೆಯ ಮಟ್ಟ ತಗ್ಗಿಸಲು ಮಾಡುವ ಕೋರಿಕೆಗೆ ಮಾಹಿತಿ ಒದಗಿಸುವುದು. 5) ವ್ಯಕ್ತಿ ಮತ್ತೆ ಅಪರಾಧ ಮಾಡಬಹುದಾದ ಅಪಾಯವನ್ನು ಪರೀಕ್ಷಿಸುವುದು. 6) ವಿಚ್ಛೇದನದ ಕೇಸುಗಳಲ್ಲಿ ಮಕ್ಕಳು ಯಾರ ವಶದಲ್ಲಿರಬೇಕು ಎಂದು ನಿರ್ಣಯಿಸುವುದು. 7) ವ್ಯಕ್ತಿಗಾಗಿರಬಹುದಾದ ಅಪಾಯ, ನೋವು ಮುಂತಾದವುಗಳ ಮೌಲ್ಯೀಕರಣ. 8) ಪಾಲಿಗ್ರಾಫ್‌ಗಳ ದತ್ತಾಂಶಗಳ ಅರ್ಥವಿವರಣೆ 9) ಸಾಕ್ಷಿದಾರರ ವಿಶ್ವಸನೀಯತೆ, 10) ವಿಶೇಷ ಮನೋಮಾಪನಗಳು.

ಕಾನೂನು ಮನೋವಿಜ್ಞಾನಿಗಳು ಪೋಲಿಸರು ಮತ್ತು ಇತರ ಕಾನೂನು ಪಾಲನಾ ಸಿಬ್ಬಂದಿಗಳ ತರಬೇತಿ, ಜ್ಯೂರಿಗಳ ಆಯ್ಕೆಯಲ್ಲಿ ಸಲಹೆ ಮುಂತಾದ ಕೆಲಸವನ್ನು ಮಾಡುತ್ತಾರೆ. ಒತ್ತಡ ನಿವಾರಣೆ, ಆತ್ಮಹತ್ಯೆಯ ಪ್ರಯತ್ನಗಳಲ್ಲಿ ಕಾನೂನು ಪಾಲನಾ ಸಿಬ್ಬಂದಿಗಳಿಗೆ ಸಹಾಯ, ತಜ್ಞರಂತೆ ಸಾಕ್ಷಿ ನುಡಿಯುವುದು ಮೊದಲಾದ ಕರ್ತವ್ಯಗಳಿರುತ್ತವೆ. ಅಪರಾಧಿಗಳನ್ನು ಬಂಧಿಸಿರುವ ಜೈಲುಗಳು ಮತ್ತು ಪರಿವರ್ತನಾ ಕೇಂದ್ರಗಳಲ್ಲಿ ಮಾನಸಿಕ ಚಿಕಿತ್ಸೆ, ಪರಾಮರ್ಶನ ನೀಡುತ್ತಾರೆ. ನೈದಾನಿಕ ಮನೋವಿಜ್ಞಾನಿಗಳ ಪಾತ್ರದಲ್ಲಿ, ನ್ಯಾಯಾಲಯದ ಕೋರಿಕೆಯ ಮೇರೆಗೆ ಅಪರಾಧಿಗಳಿಗೆ ಚಿಕಿತ್ಸೆ, ಆಘಾತಕ್ಕೆ ಒಳಗಾದವರಿಗೆ ಸಹಾಯ, ಹಿಂಸೆ ಅಥವಾ ವಿಚ್ಛೇದನದಿಂದ ಶೋಷಿತ ಕುಟುಂಬಕ್ಕೆ ಪರಾಮರ್ಶನ ಮುಂತಾದವನ್ನು ನಡೆಸುತ್ತಾರೆ. ಇಲ್ಲಿ ಕೆಲಸಗಳು ನ್ಯಾಯಾಂಗ ವ್ಯವಸ್ಥೆಯೊಳಗೆ ನಡೆದರೂ ಕೆಲಸ ನೈದಾನಿಕ ಮನೋವಿಜ್ಞಾನಿಯದಾಗಿರುತ್ತದೆ. ನೈದಾನಿಕ ಕೆಲಸಗಳನ್ನು ಕೆಲವೊಮ್ಮೆ ಮಾಡಿದರೂ ಕಾನೂನು ಮನೋವಿಜ್ಞಾನಿಗಳ ದೃಷ್ಟಿಕೋನವೇ ಬೇರೆಯಾಗಿರುತ್ತದೆ. ವ್ಯಕ್ತಿಯ ಅಭಿಪ್ರಾಯಕ್ಕಿಂತ ಇಲ್ಲಿ ವ್ಯಕ್ತಿ ಹೇಳುವ ವಿಷಯಗಳ ನಿಖರತೆ ಮುಖ್ಯವಾಗುತ್ತದೆ. ಸಾಧಾರಣವಾಗಿ ಇವರ ವಿಷಯಿಗಳು ಸ್ವ-ಇಚ್ಛೆಯಿಂದ ಬರುವುದಿಲ್ಲ. ನ್ಯಾಯಾಲಯಗಳ ಅಪ್ಪಣೆಯ ಮೇರೆಗೆ ಬರುತ್ತಾರೆ. ಇಲ್ಲಿ ವಿಷಯಿಗೆ “ಸಹಾಯ” ಮಾಡುವ ಉದ್ದೇಶಕ್ಕಿಂತಾ ಮಾಹಿತಿ ಸಂಗ್ರಹಣೆ ಮುಖ್ಯವಾಗುತ್ತದೆ. ನ್ಯಾಯಾಲಯಗಳ ಆದೇಶ, ಅವುಗಳ ವೇಳಾಪಟ್ಟಿಯಂತೆ ಮಾಪನಗಳು ನಡೆಯುತ್ತವೆ.

ನ್ಯಾಯಾಲಯಗಳನ್ನು ಅವಲಂಬಿಸಿ (ಸಿವಿಲ್, ಕ್ರಿಮಿನಲ್, ಕೌಟುಂಬಿಕ ಇತ್ಯಾದಿ) ಇವರು ಮಾಡುವ ಕೆಲಸವೂ ಭಿನ್ನವಾಗಿರಬಹುದು. ವೈದ್ಯಕೀಯ, ಮನೋವೈದ್ಯಕೀಯ ‘ತಪ್ಪು ಅಭ್ಯಾಸಗಳ’ (ಮಾಲ್ ಪ್ರಾಕ್ಟೀಸ್) ಮೊಕದ್ದಮೆಗಳು, ಮೊಮ್ಮಕ್ಕಳನ್ನು ಸಂದರ್ಶಿಸುವ ಹಕ್ಕು ಮೊದಲಾದ ಹೊಸ ವಿಷಯಗಳು ಕಾಣಿಸಿಕೊಳ್ಳುತ್ತಿವೆ. ಭಾರತದಲ್ಲಿ ಗುಜರಾತಿನಲ್ಲಿ ಫಾರೆನ್ಸಿಕ್ ವಿಶ್ವವಿದ್ಯಾಲಯ ಸ್ಥಾಪಿತವಾಗಿದ್ದು ಈ ವಿಷಯದಲ್ಲಿ ಅಧ್ಯಯನಗಳು ನಡೆಯುತ್ತಿವೆ. ಇತ್ತೀಚೆಗೆ ಸೈಬರ್ ಕ್ರೈಮ್ ಎಂದು ಮಾಹಿತಿ ಜಾಲಗಳ ಮೂಲಕ ನಡೆಯುವ ಅಪರಾಧಗಳ ವಿಷಯವೂ ಹೆಚ್ಚು ಪ್ರಸ್ತುತವಾಗುತ್ತಿದೆ.



ವಿಲಿಯಂ ಮೌಲ್ಟನ್ ಮಾಸ್ಟರ್ನ್ (1893–1947) ಸುಳ್ಳುಪತ್ತೆಹಚ್ಚುವ ಯಂತ್ರದ ಜನಕ